# ಪೇಸ್ ಎಂಬ ಸ್ಫೂರ್ತಿ

**ಲಿಯಾಂಡರ್ ಪೇಸ್ ಕೇವಲ ಒಬ್ಬ ಆಟಗಾರ ಅಲ್ಲ. ಬದಲಾಗಿ ಅವರೊಬ್ಬ ಛಲವಾದಿ, ಸ್ಫೂರ್ತಿಯ ಚಿಲುಮೆ. ಭಾರತದ ಟೆನಿಸ್‌ನ ಅಪ್ರತಿಮ ಸಾಧಕ. ಕ್ರೀಡಾಂಗಣದೊಳಗೆ ಮಾತ್ರವಲ್ಲ; ಹೊರಗೂ ಹೋರಾಡುತ್ತಲೇ ಬದುಕುತ್ತಿದ್ದಾರೆ.**

■ ಕೆ.ಓಂಕಾರ ಮೂರ್ತಿ

ಟೆನಿಸ್ ಜಗತ್ತಿನಲ್ಲಿ 40 ವರ್ಷ ಎಂದರೆ ಆತನ ಆಟ ಮುಗಿಯಿತು ಎಂದರ್ಥ. ಇಷ್ಟು ವಯಸ್ಸಾದವರು ಕಣಕ್ಕಿಳಿದು ಆಡಿದರೆ ಅದೊಂದು ಖಂಡಿತ ಅದ್ಭುತ. ಆದರೆ ಈ ವಯಸ್ಸಿನಲ್ಲೂ ಸ್ಥಿರ ಪ್ರದರ್ಶನ ನೀಡುತ್ತಾ ಗ್ರ್ಯಾಂಡ್‌ಸ್ಲಾಮ್ ಚಾಂಪಿಯನ್ ಎನಿಸಿದರೆ?! ಖಂಡಿತ ಅದೊಂದು ವಿಸ್ಮಯ. ಮೊನ್ನೆ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್‌ನಲ್ಲಿ ಲಿಯಾಂಡರ್ ಪೇಸ್ ಚಾಂಪಿಯನ್ ಆದಾಗ ಅವರ ವಯಸ್ಸು 40. ಈ ಸಾಧನೆ ಮಾಡಿದ ಅತ್ಯಂತ ಹಿರಿಯ ಆಟಗಾರ ಅವರು!

ಅಪಾಯಕಾರಿ ಮೆದುಳು ಸೋಂಕಿನಿಂದ ಪಾರಾಗಿ ಬಂದ ಕ್ಷಣವಿರಬಹುದು, ತಮ್ಮನ್ನು ಮೂಲೆಗುಂಪು ಮಾಡಲು ಸಹ ಆಟಗಾರರು ನಡೆಸಿದ ಯತ್ನವನ್ನು ದಾಟಿಕೊಂಡು ಬಂದ ಸಂದರ್ಭವಿರಬಹುದು. ಎಲ್ಲದಕ್ಕೂ ತಮ್ಮ ಆಟದ ಮೂಲಕವೇ ಲಿಯಾಂಡರ್ ಉತ್ತರ ನೀಡುತ್ತಿದ್ದಾರೆ. ಅದೂ 40ನೇ ವಯಸ್ಸಿನಲ್ಲಿ.!

ಇದು ಕೇವಲ ಪ್ರತಿಭೆಯ ಪ್ರಶ್ನೆ ಅಲ್ಲ; ಟೆನಿಸ್ ಆಟಕ್ಕೆ ಲಿಯಾಂಡರ್ ತಮ್ಮನ್ನು ಅರ್ಪಿಸಿಕೊಂಡಿರುವ ರೀತಿಗೆ ಸಾಕ್ಷಿ. ಪೇಸ್ ಟೆನಿಸ್ ಆಟ ಶುರು ಮಾಡಿ ಬರೋಬ್ಬರಿ 23 ಸಂವತ್ಸರಗಳು ಕಳೆದು ಹೋಗಿವೆ. ಆದರೆ ಪ್ರತಿ ಬಾರಿ ಅವರು ಅಂಗಳಕ್ಕೆ ಕಾಲಿರಿಸಿದಾಗಲೂ ಅದೇ ಪ್ರೀತಿ, ಅದೇ ಕನಸು, ಅದೇ ಅಭಿಮಾನ, ಅದೇ ಛಲ.

ಭಾರತದ ಪರ ಅತಿ ಹೆಚ್ಚು ಗ್ರ್ಯಾಂಡ್‌ಸ್ಲಾಮ್ ಗೆದ್ದ ಆಟಗಾರ ಪೇಸ್. ಇದುವರೆಗೆ ಎಂಟು ಡಬಲ್ಸ್ ಹಾಗೂ ಆರು ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದಿದ್ದಾರೆ. 30 ಫೈನಲ್‌ಗಳಲ್ಲಿ ಪೈಪೋಟಿ ನಡೆಸಿದ್ದಾರೆ. 1996ರ ಅಟ್ಲಾಂಟ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕದ ಸಾಧನೆ ಮಾಡಿದ್ದರು. ಈತ ಈ ಸಾಧನೆ ಮಾಡಿದ ಭಾರತದ ಮೊದಲ ಟೆನಿಸ್ ಆಟಗಾರ.

‘ನನಗೆ ಸಂಖ್ಯೆಗಳಲ್ಲಿ ನಂಬಿಕೆ ಇಲ್ಲ. ಆದರೆ ಇಷ್ಟು ವರ್ಷ ಸ್ಥಿರ ಪ್ರದರ್ಶನ ನೀಡಲು ಸಾಧ್ಯವಾಗಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ನಾನು ಗೆಲ್ಲುತ್ತೇನೆ ಎಂದು ಯಾರಿಗೂ ಭರವಸೆ ನೀಡುವುದಿಲ್ಲ. ಆದರೆ ಶೇಕಡಾ ನೂರರಷ್ಟು ಪ್ರಯತ್ನ ಹಾಕಿ ಆಡುತ್ತೇನೆ ಎಂದು ಧೈರ್ಯದಿಂದ ಹೇಳಬಲ್ಲೆ’ ಎಂದು ನುಡಿಯುತ್ತಾರೆ ಪೇಸ್.

ಲಿಯಾಂಡರ್‌ಗೆ ಅಮೆರಿಕದ ಆಟಗಾರ್ತಿ ಮಾರ್ಟಿನಾ ನವ್ರಾಟಿಲೋವಾ ಸ್ಫೂರ್ತಿಯಂತೆ. ಏಕೆಂದರೆ ನವ್ರಾಟಿಲೋವಾ 49ನೇ ವಯಸ್ಸಿನಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿದ್ದರು. ಅಂದ ಹಾಗೆ, ಮೊನ್ನೆ ಪೇಸ್ ಚಾಂಪಿಯನ್ ಆದಾಗ ಅವರನ್ನು ಅಭಿನಂದಿಸಿದ ಮೊದಲ ವ್ಯಕ್ತಿ ನವ್ರಾಟಿಲೋವಾ.

‘ಬ್ರೇನ್ ಟ್ಯೂಮರ್’ ಎಂಬ ಕಾಯಿಲೆ ಪೇಸ್‌ಗೆ ಕಾಣಿಸಿಕೊಂಡಿದೆ ಎಂಬ ಸುದ್ದಿ ಗೊತ್ತಾದಾಗ ಟೆನಿಸ್ ಜಗತ್ತು ಮಾತ್ರವಲ್ಲ; ಇಡೀ ಕ್ರೀಡಾರಂಗವೇ ದಂಗುಬಡಿದು ಹೋಗಿತ್ತು. ಪೇಸ್ ಅವರ ಟೆನಿಸ್ ಜೀವನ ಬಿಟ್ಟುಬಿಡಿ, ಇನ್ನು ಅವರು ಬದುಕಿ ಉಳಿಯುವುದೇ ಕಷ್ಟ ಎಂದು ಕೆಲವರು ಅಭಿಪ್ರಾಯಪಟ್ಟಿದ್ದರು.

ಆದರೆ ಇದು ‘ಬ್ರೇನ್ ಟ್ಯೂಮರ್’ ಅಲ್ಲ; ಅಪಾಯಕಾರಿ ಮೆದುಳು ಸೋಂಕು ಎಂದು ದೃಢಪಟ್ಟಿತ್ತು. ಕೆಲದಿನಗಳಲ್ಲಿ ಈ ಸಮಸ್ಯೆ ವಿರುದ್ಧ ಹೋರಾಡಿ ಮತ್ತೆ ಅಂಗಳಕ್ಕಿಳಿದಿದ್ದರು.



ಈಗಾಗಲೇ ಅವರು ಆರು ಒಲಿಂಪಿಕ್ಸ್‌ಗಳಲ್ಲಿ ಸ್ಪರ್ಧಿಸಿದ್ದಾರೆ. 2016ರ ರಿಯೋ ಡಿ ಜನೈರೊದಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಳ್ಳುವ ಕನಸು ಹೊಂದಿದ್ದಾರೆ. ಪೇಸ್ ಛಲದ ಎದುರು ಈ ಕನಸು ಯಾವ ಲೆಕ್ಕ?